ಹೋಗುವ ಮಾರ್ಗದ ಮೂಲಕ ಇತರ ದೇವಾಲಯಗಳ ಕಡೆ ನಡೆಯೋಣ. ಆಗ ನಮಗೆ ಹೀಗೆ ಭಾವಿಸದೆ ಇರಲು ಸಾಧ್ಯವಾಗದು: "ಆಹಾ! ಸ್ವಾಮೀಜಿಯವರ ಪವಿತ್ರ ಪಾದಗಳು ಅದೆಷ್ಟು ಸಲ ಈ ಮಾರ್ಗವನ್ನು ಕ್ರಮಿಸಿರಬಹುದು? ಅದಲ್ಲದೆ, ಶ್ರೀರಾಮಕೃಷ್ಣರ ಬಹುತೇಕ ಸಂನ್ಯಾಸಿ ಶಿಷ್ಯರು, ಅನಂತರ ಬಂದ ರಾಮಕೃಷ್ಣ ಮಹಾಸಂಘದ ಸಂನ್ಯಾಸಿಗಳು ಮತ್ತು ಪ್ರಪಂಚದಾದ್ಯಂತ ಬರುವ ಅಗಣಿತ ಸಂಖ್ಯೆಯ ಭಕ್ತರು ಇಲ್ಲಿ ಓಡಾಡಿರಬಹುದಲ್ಲವೆ?"

ನಮ್ಮ ಬಲಗಡೆ, ಮಠದ ಪ್ರಾಂಗಣ ಮತ್ತು ಶ್ರೀರಾಮಕೃಷ್ಣರ ದೇಗುಲದ ಪೂರ್ವ ದಿಕ್ಕಿನಲ್ಲಿ ಇರುವ ಹುಲ್ಲುಹಾಸಿನ ನಡುವೆ, ಒಂದು ಸಣ್ಣ ಹೂವಿನ ತೋಟವಿದೆ. ಇಲ್ಲಿಯೇ, ಒಂದು ಬಿಲ್ವ ವೃಕ್ಷದಡಿಯಲ್ಲಿ, ಸ್ವಾಮೀಜಿಯವರು ೯.೧೨.೧೮೯೮, ಶುಕ್ರವಾರದಂದು ಶ್ರೀರಾಮಕೃಷ್ಣರನ್ನು ಪೂಜಿಸಿದರು. ಮಠವು ನೀಲಾಂಬರ ಮುಖರ್ಜಿ ಉದ್ಯಾನಗೃಹದಿಂದ ಇಲ್ಲಿಗೆ ಸ್ಥಳಾಂತರಗೊಂಡ ಸಂದರ್ಭ ಅದು.

ನಾವು ದೇವಾಲಯಗಳತ್ತ ಮುಂದುವರಿಯುತ್ತಿದ್ದಂತೆ 'ನಾಗಲಿಂಗ' ಮತ್ತು 'ಬಂಗ್‌ಶೀ ಬಟ್' (ಆಲದ ಮರ) ಜಾತಿಯ ಎರಡು ದೊಡ್ಡ ಮರಗಳನ್ನು ನಮ್ಮ ಎಡಭಾಗದಲ್ಲಿ ನೋಡುತ್ತೇವೆ. (ಆಲದ ಮರವನ್ನು 'ವಟ ವೃಕ್ಷ' ಎಂದು ಸಂಸ್ಕೃತದಲ್ಲಿ ಕರೆಯುತ್ತಾರೆ. ಅದನ್ನು 'ಬಟ್' ಎಂದು ಬಂಗಾಳಿಯಲ್ಲಿ ಕರೆಯುತ್ತಾರೆ, ಈ ಮರದ ಸುಮಾರು ೨೦೦ ಬಗೆಗಳಿವೆ. 'ಬಂಗ್‌ಶೀ ಬಟ್' ಅಥವಾ 'ತೊಂಗಾ ಬಟ್' ಎನ್ನುವುದು ಆಲದ ಮರದ ಒಂದು ಅಪರೂಪದ ಬಗೆ. ಇದರ ಎಲೆಗಳನ್ನು ಆಯುರ್ವೇದ ಮತ್ತು ಯುನಾನಿ ಚಿಕಿತ್ಸೆಗಳಲ್ಲಿ ಬಹಳವಾಗಿ ಉಪಯೋಗಿಸುತ್ತಾರೆ. ತೊಂಗಾ ಬಟ್ ಜಾತಿಯ ಮರಕ್ಕೆ 'ಕೃಷ್ಣನ ಆಲ' ಅಥವಾ 'ಕೃಷ್ಣನ ಬೆಣ್ಣೆಯ ಬಟ್ಟಲು' ಎಂಬ ಪ್ರಸಿದ್ಧವಾದ ಹೆಸರಿದೆ. ಏಕೆಂದರೆ ಅದರ ಎಲೆಗಳು ಬಟ್ಟಲಿನ ಆಕಾರದಲ್ಲಿವೆ.) ಇವುಗಳನ್ನು ಸ್ವಾಮಿ ಬ್ರಹ್ಮಾನಂದರ ಮೇಲ್ವಿಚಾರಣೆಯಲ್ಲಿ ನೆಡಲಾಗಿತ್ತು. ನಾವೀಗ ದೇವಾಲಯಗಳ ಹತ್ತಿರ ಹೋಗೋಣ.

## ಸ್ವಾಮಿ ಬ್ರಹ್ಮಾನಂದರ ಮಂದಿರ

ನಮ್ಮ ಎಡಭಾಗಕ್ಕೆ ಕಾಣುವುದು ಸ್ವಾಮಿ ಬ್ರಹ್ಮಾನಂದರಿಗೆ ಸಮರ್ಪಿತವಾದ ದೇವಾಲಯ. ಅವರು ಶ್ರೀರಾಮಕೃಷ್ಣರ ಮಾನಸ ಪುತ್ರರು; ರಾಮಕೃಷ್ಣ ಮಹಾಸಂಘದ ಪ್ರಥಮ ಅಧ್ಯಕ್ಷರು. ಅವರನ್ನು, 'ರಾಜಾ ಮಹಾರಾಜ್', 'ರಾಖಾಲ್ ಮಹಾರಾಜ್' ಅಥವಾ ಸರಳವಾಗಿ 'ಮಹಾರಾಜ್' ಎಂದು ಕರೆಯುವ ವಾಡಿಕೆ. ೧೯೨೨ರ ಏಪ್ರಿಲ್ ೧೦ ನೆಯ ತಾರೀಖು, ಅವರು ಮಹಾಸಮಾಧಿಯನ್ನು ಹೊಂದಿದರು. ಅವರ ಅಂತ್ಯಸಂಸ್ಕಾರಗಳನ್ನು ನೆರವೇರಿಸಿದ ಸ್ಥಳದಲ್ಲಿಯೇ ಈಗ ಈ ದೇವಮಂದಿರ ತಲೆಯೆತ್ತಿದೆ. ಈ ಮಂದಿರವನ್ನು ಕೇವಲ ಎರಡೇ ವರ್ಷಗಳಷ್ಟು ಕಡಮೆ ಅವಧಿಯಲ್ಲಿ



ಸ್ವಾಮಿ ಬ್ರಹ್ಮಾನಂದರ ಮಂದಿರ

ನಿರ್ಮಾಣ ಮಾಡಲಾಯಿತು. ಸ್ವಾಮಿ ಬ್ರಹ್ಮಾನಂದರ ಶಿಷ್ಯರಾಗಿದ್ದ ಶ್ರೀ ಶ್ಯಾಮ್ ಘೋಷ್ ಎಂಬುವವರು ಇದಕ್ಕಾದ ಸುಮಾರು ೪೦,೦೦೦ ರೂಪಾಯಿಗಳ ಸಂಪೂರ್ಣ ವೆಚ್ಚವನ್ನು ತಾವೇ ವಹಿಸಿಕೊಂಡರು. ಶ್ಯಾಮ್ ಘೋಷ್, ಶ್ರೀರಾಮಕೃಷ್ಣರ ಗೃಹೀಭಕ್ತರಾಗಿದ್ದ ನವಗೋಪಾಲ ಘೋಷ್ ಅವರ ಸುಪುತ್ರ. ೧೯೨೪ ರ ಫೆಬ್ರವರಿ ೭, ಸ್ವಾಮಿ ಬ್ರಹ್ಮಾನಂದರ ಜಯಂತಿಯ ದಿನದಂದು, ಈ ದೇವಾಲಯವನ್ನು ಸ್ವಾಮಿ ಶಿವಾನಂದರು ಲೋಕಾರ್ಪಣೆ ಮಾಡಿದರು.

ಈ ದೇವಾಲಯದಲ್ಲಿ ಸ್ವಾಮಿ ಬ್ರಹ್ಮಾನಂದರ ಅಮೃತಶಿಲೆಯ ಮೂರ್ತಿಯಿದೆ. ಸ್ವಾಮಿ ಬ್ರಹ್ಮಾನಂದರು ತಮ್ಮ ಹಿಂದಿನ ಜನ್ಮದಲ್ಲಿ ಶ್ರೀಕೃಷ್ಣನ ಬಾಲಸಖರಾಗಿದ್ದರೆಂದು ಶ್ರೀರಾಮಕೃಷ್ಣರೇ ಘೋಷಿಸಿದ್ದಾರೆ. ಈ ಸಂಗತಿಯನ್ನು ನೆನಪಿಸಲೋ ಎಂಬಂತೆ, ಬಾಲಕೃಷ್ಣನ ಪುಟ್ಟದೊಂದು ವಿಗ್ರಹವನ್ನು ಬ್ರಹ್ಮಾನಂದರ ಮೂರ್ತಿಯ ಮುಂದುಗಡೆ ಇರಿಸಲಾಗಿದೆ. ಅದನ್ನು ಶ್ರೀಕೃಷ್ಣ ಜಯಂತಿ ಮುಂತಾದ ವಿಶೇಷ ದಿನಗಳಲ್ಲಿ ಪೂಜಿಸಲಾಗುತ್ತದೆ. ದೇವಾಲಯದ ಗೋಪುರದ ಮೇಲೆ, ಮಹಾವಿಷ್ಣುವಿನ ಚಕ್ರಾಯುಧವನ್ನು ನೆನಪಿಗೆ ತರುವಂಥ ಚಕ್ರಾಕೃತಿ ಇದೆ.

ಈ ದೇವಮಂದಿರದ ಮೇಲಿನ ಮಹಡಿಯಲ್ಲಿ ಸ್ವಾಮಿ ಬ್ರಹ್ಮಾನಂದರ ಶಯನಗೃಹವಿದೆ. ಅಲ್ಲಿ ಒಂದು ಮಂಚವಿದೆ ಹಾಗೂ ಅವರು ಉಪಯೋಗಿಸುತ್ತಿದ್ದ ಕೆಲವು ವಸ್ತುಗಳಿವೆ. ಸ್ವಾಮಿ ಬ್ರಹ್ಮಾನಂದಜಿ ಅವರ ಜಯಂತಿಯ ದಿನದಂದು ಅವುಗಳನ್ನು ಜನರಿಗೆ ನೋಡಲು ಬಿಡುತ್ತಾರೆ. *(ಮುಂದುವರಿಯುವುದು)*

**ವಿವೇಕಪ್ರಭ ಪತ್ರಿಕೆಯ ಚಂದಾದಾರಿಕೆಯ ಸಂಬಂಧದ ಎಲ್ಲ ವಿಚಾರಣೆಗಳಿಗಾಗಿ ಕೆಳಗಿನ ಮೊಬೈಲ್ ಸಂಖ್ಯೆಗೆ ಕರೆ ಮಾಡಿ:**

**9481533505 (ಕೆ.ಪಿ. ವೇಣುಗೋಪಾಲ್)**